1 ಪ್ರ.[illegible]/[illegible]/190/2015-16

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಡಳಿತಗಾರರ ಕಾರ್ಯಾಲಯ

**ದಿನಾಂಕ: 27-04-2015 ರಂದು ಮಧ್ಯಾಹ್ನ 12-00 ಘಂಟೆಗೆ ಓ.ಎಫ್.ಸಿ. ಸಂಸ್ಥೆಗಳಿಂದ ಬರಬೇಕಾದ ಆದಾಯ ಕುರಿತಂತೆ ನಡೆದ ಸಭೆಯ ನಡವಳಿಗಳು**

* * * * *

| ಹಾಜರಿದ್ದ ಅಧಿಕಾರಿಗಳು | ಹಾಜರಿದ್ದ ಓ.ಎಫ್.ಸಿ. ಸೇವಾ ಸಂಸ್ಥೆಗಳ ಪದಾಧಿಕಾರಿಗಳು |
|---|---|
| ಆಯುಕ್ತರು | Sri Jagadish, YOU Broadband |
| ಮುಖ್ಯ ಅಭಿಯಂತರರು (ರ.ಮೂ.ಸೌ.) | Sri Shibu Francis, Vodafone ✓ |
| ಮುಖ್ಯ ಅಭಿಯಂತರರು (ಓ.ಎಫ್.ಸಿ.) | Sri Manohara, Sterlite |
| ಕಾ.ಪಾ.ಅ (ಓ.ಎಫ್.ಸಿ.) | Sri Partha Jana, GAIL |
| ಸ.ಕಾ.ನಿ.ಅ (ಓ.ಎಫ್.ಸಿ.) | Sri K.S. Prabhakar, IAS(O) |
| | Sri Manjunath HM |
| | Sri Rakesh Upadyay |
| | Sri Sunil Kumar |
| | Sri Thiru |
| | Sri Shivu Kumar |
| | Sri R.M. Limbare, BSNL |
| | Sri M.N. Ramesh Kumar, |
| | Sri Ravikumar K. |
| | Sri Venkatesh R. |
| | Sri Prasad Reddy |
| | Sri Anush Rao, RJIL |
| | Sri Mahalingam, RJIL ✓ |
| | Sri Ananth Ravi, RJIL |
| | Sri VV Babu, RJIL |
| | Sri S. Vishwanath, Airtel |
| | Sri S. Girish, Airtel |
| | Sri S. Raghu C., Aircel |
| | Sri Shreesha, Aircel |
| | Sri Jairam S., ACT |
| | Sri G Sandesh, L&T |
| | Sri Jacob George, L&T |
| | Sri K Kirankumar TTIL |
| | Sri Bharath Bhandar, IDEA ✓ |
| | Sri V.P. Tunbe, GAIL |
| | Sri Ajay Jindal, GAIL |

CHIEF ENGINEER OFC CELL
BBMP
No. 212
Date 07/05/15
Bruhat Bangaluru Mahanagara Palike

ಮುಖ್ಯ ಅಭಿಯಂತರರು (ಓ.ಎಫ್.ಸಿ.) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು. ನಂತರ ಸಭೆಯಲ್ಲಿ ಓ.ಎಫ್.ಸಿ. ಸಂಸ್ಥೆಗಳ ಪರವಾಗಿ ಹಾಜರಾಗಿದ್ದ ಪದಾಧಿಕಾರಿಗಳ ಪರಿಚಯ ಮಾಡಿಕೊಂಡರು.

ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಮುಖ್ಯ ಅಭಿಯಂತರರು (ಓ.ಎಫ್.ಸಿ.)ರವರು ಆಡಳಿತಗಾರರಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಓ.ಎಫ್.ಸಿ. ಬೈಲಾಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯವು ನೀಡಿರುವ ಆದೇಶಗಳನುಸಾರ ಹಾಗೂ ಸಾರ್ವಜನಿಕ ವಲಯಗಳಿಂದ ವ್ಯಾಪಕವಾಗಿ ಕೇಳಿ ಬಂದಿರುವ ದೂರುಗಳನ್ನು ಆಧರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಸಂಸ್ಥೆಗಳಿಗೆ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲು ಅನುಮತಿ ನೀಡಿರುವ ಪ್ರದೇಶಗಳಿಗಿಂತ ಹೆಚ್ಚಿನ ಪ್ರದೇಶಗಳಲ್ಲಿ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲಾಗಿದ್ದು ಹಾಗೂ ಈ ಬಗ್ಗೆ ಓ.ಎಫ್.ಸಿ/ಡಕ್ಟ್ ಅಳವಡಿಕೆ ಶುಲ್ಕಗಳನ್ನು ಪಾವತಿಸಲು ಡಿಮ್ಯಾಂಡ್ ನೋಟೀಸ್‌ಗಳನ್ನು ಜಾರಿಮಾಡಲಾಗಿದ್ದರೂ ಸಹ ಓ.ಎಫ್.ಸಿ. ಸಂಸ್ಥೆಗಳು ಪಾಲಿಕೆಗೆ ಬಾಕಿ ಶುಲ್ಕ ಪಾವತಿ ಮಾಡದಿರುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ಸಭೆಯನ್ನು ಕರೆಯಲಾಗಿದೆ ಎಂದು ಮುಖ್ಯ ಅಭಿಯಂತರರು (ಓ.ಎಫ್.ಸಿ.)ರವರು ಆಡಳಿತಗಾರರಿಗೆ ತಿಳಿಸಿದರು.

ಆಡಳಿತಗಾರರಿಂದ ಮುಖ್ಯ ಅಭಿಯಂತರರು (ಓ.ಎಫ್.ಸಿ.)ರವರು ನೀಡಿದ್ದ ದಾಖಲೆ ಹಾಗೂ ಕಡತಗಳನ್ನು ಪರಿಶೀಲಿಸಲಾಯಿತು.

ಮೊದಲನೆಯದಾಗಿ, ಸದರಿ ದಾಖಲೆಗಳನ್ವಯ ಓ.ಎಫ್.ಸಿ. ಸಂಸ್ಥೆಗಳಲ್ಲದೇ ಪ್ರತಿಷ್ಠಿತ ಟೆಲಿಕಾಂ ಸಂಸ್ಥೆಗಳೂ ಸಹ ಅನುಮತಿ ಪಡೆದಿರುವ ಪ್ರದೇಶಗಳಿಗಿಂತ ಹೆಚ್ಚಿನ ಪ್ರದೇಶಗಳಲ್ಲಿ ಕೇಬಲ್‌ಗಳನ್ನು ಅಳವಡಿಸಿರುವುದು ಕಂಡುಬಂದಿದ್ದು, ಟೆಲಿಕಾಂ ಸಂಸ್ಥೆಗಳು ಈವರೆಗೂ ಪಾಲಿಕೆಯಿಂದ ಅನುಮತಿ ಪಡೆದಿರುವ ಹಾಗೂ ಇಲ್ಲಿಯವರೆಗೂ ಅಂತಹ ಸಂಸ್ಥೆಗಳಿಂದ ಓ.ಎಫ್.ಸಿ. ಕೇಬಲ್‌ಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸಿರುವ ಪ್ರದೇಶಗಳ ಮಾಹಿತಿಯನ್ನು ಸಹ ನೀಡುವಂತೆ ಸೂಚಿಸಲಾಯಿತು.

**ಟೆಲಿಕಾಂ ಸಂಸ್ಥೆಗಳ ಪದಾಧಿಕಾರಿಗಳು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲು ಅರ್ಜಿ ಸಲ್ಲಿಸುವುದು, ಕಾರ್ಯ ವಿಧಾನ, ಅನುಮತಿ ನೀಡುವುದು, ಅನುಮತಿ ನಿರಾಕರಣೆ ಹಾಗೂ ಇನ್ನಿತರ ಕೆಲಸಕಾರ್ಯಗಳನ್ನು ಗಣಕೀಕೃತಗೊಳಿಸಿ ಆನ್‌ಲೈನ್ ಮೂಲಕವೇ ಎಲ್ಲವನ್ನು ನಿರ್ವಹಿಸುವುದರಿಂದ ಟೆಲಿಕಾಂ ಸಂಸ್ಥೆಗಳಿಗೆ ನಿಗದಿತ ಸಮಯದಲ್ಲಿಯೇ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಆಡಳಿತಗಾರರಿಗೆ ತಿಳಿಸಿದರು. ಅಲ್ಲದೇ ಈಗಾಗಲೇ ಸಾಕಷ್ಟು ಸಂಸ್ಥೆಗಳಿಂದ ಓ.ಎಫ್.ಸಿ/ಡಕ್ಟ್ ಅಳವಡಿಕೆ ಅವಧಿ ವಿಸ್ತರಣೆಗಾಗಿ ಅರ್ಜಿ ಸಲ್ಲಿಸಲಾಗಿರುತ್ತದೆ. ಆದರೆ ಇದುವರೆಗೂ ಅವಧಿ ವಿಸ್ತರಣಾ ಆದೇಶವನ್ನು ನೀಡಲಾಗಿರುವುದಿಲ್ಲವೆಂದು ತಿಳಿಸಿದರು.

ಆಡಳಿತಗಾರರು.

ಮುಖ್ಯ ಅಭಿಯಂತರರು (ಓ.ಎಫ್.ಸಿ.)ರವರು ಈ ಬಗ್ಗೆ ಪಾಲಿಕೆಯಲ್ಲಿ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲು ಅನುಮತಿ ನೀಡುವ ಸಂಬಂಧ ಗಣಕೀಕರಣಗೊಳಿಸಿ ಆನ್‌ಲೈನ್ ಮುಖಾಂತರವೇ ನಿರ್ವಹಣೆ ಮಾಡುವ ಬಗ್ಗೆ ಕ್ರಮವಹಿಸಲಾಗುತ್ತಿರುತ್ತದೆಂದು ಸಭೆಗೆ ತಿಳಿಸಿದರು.

ನಂತರ ಟೆಲಿಕಾಂ ಸಂಸ್ಥೆಗಳು ಪಾಲಿಕೆ ವತಿಯಿಂದ ಕೇಬಲ್ ಅಳವಡಿಕೆಗಾಗಿ ಅನುಮತಿ ಪಡೆದಿರುವ ರಸ್ತೆಗಳು, ಕೇಬಲ್‌ಗಳನ್ನು ಈವರೆಗೂ ಅಳವಡಿಸಲಾಗಿರುವ ಬಗ್ಗೆ ಮಾಹಿತಿ ಹಾಗೂ ಅನುಮತಿ ಪಡೆದಿರುವುದಕ್ಕಿಂತ ಹೆಚ್ಚಾಗಿ ಅಳವಡಿಸಲಾಗಿರುವ ಮಾಹಿತಿಯನ್ನು ಸಾಫ್ಟ್ ಕಾಪಿ ಮುಖಾಂತರ ಹಾಗೂ ಗೂಗಲ್ ಮ್ಯಾಪಿಂಗ್ ಮುಖಾಂತರ ಪಾಲಿಕೆಗೆ ಒದಗಿಸಲು ಸೂಚಿಸಲಾಯಿತು. ಹಾಗೂ ಓ.ಎಫ್.ಸಿ. ಅಳವಡಿಕೆ ಸಂಸ್ಥೆಗಳು ಈಗಾಗಲೇ ಪಾಲಿಕೆಯಿಂದ ನೀಡಿರುವ ಅನುಮತಿ ಪತ್ರಗಳ ಪಿ.ಡಿ.ಎಫ್. ಫೈಲ್‌ನ್ನು ಕೂಡ ನೀಡಲು ಸಂಸ್ಥೆಗಳಿಗೆ ಸೂಚಿಸಲಾಯಿತು.

ಅಲ್ಲದೇ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಿರುವ ಸಂಸ್ಥೆಗಳು ಅನಧಿಕೃತ ಓ.ಎಫ್.ಸಿ/ಡಕ್ಟ್ ಅಳವಡಿಕೆ ಶುಲ್ಕಗಳನ್ನು ಪಾವತಿಸದೇ ಬಾಕಿ ಇಟ್ಟುಕೊಂಡಿದ್ದು, ಈ ಬಗ್ಗೆ ಕೆಲವು ಸಂಸ್ಥೆಗಳಿಗೆ ಬಾಕಿ ಪಾವತಿ ನೋಟೀಸ್ ಜಾರಿಮಾಡಲಾಗಿರುತ್ತದೆ. ನೋಟೀಸ್ ಜಾರಿ ಮಾಡಿ ವರ್ಷ ಕಳೆದರೂ ಸಹ ಕೆಲವು ಸಂಸ್ಥೆಗಳಿಂದ ಉತ್ತರವಾಗಲೀ, ಹಣ ಪಾವತಿ ಮಾಡಿರುವುದಾಗಲೀ ಕಂಡುಬಂದಿರುವುದಿಲ್ಲ. ಅಂತಹ ಸಂಸ್ಥೆಗಳ ವಿರುದ್ಧ ಕೂಡಲೇ ಕ್ರಮಗೊಳ್ಳುವುದಾಗಿಯೂ ಸಹ ತಿಳಿಸಲಾಯಿತು.

ರಿಲಯನ್ಸ್ ಸಂಸ್ಥೆಯ ಅಧಿಕಾರಿಯವರು ಮಾತನಾಡುತ್ತಾ, ತಮ್ಮ ಸಂಸ್ಥೆಯಿಂದ ಪಾಲಿಕೆಯ ವ್ಯಾಪ್ತಿಯ ಹೊರಭಾಗಕ್ಕೂ ಸೇರಿದಂತೆ ಈ ಹಿಂದೆ ಅನುಮತಿ ಪಡೆದಿರುವ ಪ್ರದೇಶಗಳಿಗೆ ಶುಲ್ಕ ಪಾವತಿಸಲಾಗಿರುತ್ತದೆ. ಅಲ್ಲದೇ ಪಾಲಿಕೆಯ ವ್ಯಾಪ್ತಿಯಲ್ಲಿ ಅನುಮತಿ ಪಡೆದಿರುವುದಕ್ಕಿಂತ ಹೆಚ್ಚಾದ ಪ್ರದೇಶಗಳಲ್ಲಿ ಒಂದುವೇಳೆ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಿದ್ದರೆ ಹೆಚ್ಚುವರಿಯಾಗಿ ಪಾವತಿಸಲಾಗಿರುವ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳುವಂತೆಯೂ ಸಹ ಮನವಿ ಮಾಡಿದರು.

ಈಗಾಗಲೇ ಡಿಮ್ಯಾಂಡ್ ನೋಟೀಸ್ ಜಾರಿ ಮಾಡಲಾಗಿದ್ದರೂ ಸಹ ಪಾಲಿಕೆಗೆ ಬಾಕಿ ಉಳಿಸಿಕೊಂಡಿರುವ ಸಂಸ್ಥೆಗಳಿಂದ ನಿಯಮಾನುಸಾರ ಬಡ್ಡಿ ವಸೂಲಿ ಮಾಡುವಂತೆ ಅಧಿಕಾರಿಗಳಿಗೆ ಆಡಳಿತಗಾರರಿಂದ ಸೂಚಿಸಲಾಯಿತು.

ಅಲ್ಲದೇ, ನಿಯಮಬಾಹಿರವಾಗಿ ಅನುಮತಿ ಪಡೆಯದೇ ಅಳವಡಿಸಲಾಗಿರುವ ಓ.ಎಫ್.ಸಿ. ಕೇಬಲ್‌ಗಳನ್ನು ಗುರ್ತಿಸಿ ಅಂತಹ ಕೇಬಲ್‌ಗಳನ್ನು ನಿರ್ದಾಕ್ಷಿಣ್ಯವಾಗಿ ಮತ್ತೊಮ್ಮೆ ಸಂಪರ್ಕ ಒದಗಿಸಲಾಗದ ರೀತಿಯಲ್ಲಿ ಕೇಬಲ್ ಸಂಪರ್ಕವನ್ನು ಕಡಿತಗೊಳಿಸಲಾಗುವುದೆಂದು ಸೂಚಿಸಲಾಯಿತು. ಪ್ರಥಮವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರವೆಂದು ಗುರುತಿಸಿಕೊಂಡಿರುವಂತಹ ಮಹದೇವಪುರ ಹಾಗೂ ಬೊಮ್ಮನಹಳ್ಳಿ ವಲಯಗಳಿಂದ ಪ್ರಾರಂಭಿಸಲಾಗುವುದಾಗಿಯೂ ತಿಳಿಸಲಾಯಿತು.

ಆಡಳಿತಗಾರರು.

ಮುಖ್ಯ ಅಭಿಯಂತರರು (ರ.ಮೂ.ಸೌ)ರವರು ಮಾತನಾಡುತ್ತಾ, ಟೆಂಡರ್‌ಶ್ಯೂರ್ ಮಾದರಿ ರಸ್ತೆಗಳಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಕೆಗಾಗಿ ರಸ್ತೆ ಅಗೆಯುವುದನ್ನು ನಿರ್ಬಂಧಿಸಲಾಗಿರುತ್ತದೆ. ಈ ಬಗ್ಗೆ ಟೆಲಿಕಾಂ ಸಂಸ್ಥೆಗಳು ಪಾಲಿಕೆಯ ಆದೇಶಗಳನ್ನು ಕರಾರುವಾಕ್ಕಾಗಿ ಪಾಲಿಸಬೇಕೆಂದು ಕೋರಿದರು.

ಆಯುಕ್ತರು ಮಾತನಾಡುತ್ತಾ, ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಕೆ ಮಾಡುವಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗೂ ನೈಜವಾಗಿ ಸದರಿ ಸಂಸ್ಥೆಗಳಿಗೆ ಪ್ರಾಯೋಗಿಕವಾಗಿ ತೋರ್ಪಡಿಸಲು ಒಂದು ದಿನಾಂಕ ನಿಗದಿಪಡಿಸಿ ಮುಖ್ಯ ಅಭಿಯಂತರರು (ರ.ಮೂ.ಸೌ)ರವರಿಗೆ ಸೂಚಿಸಿದರು.

ಅದರಂತೆ ಮುಖ್ಯ ಅಭಿಯಂತರರು (ರ.ಮೂ.ಸೌ)ರವರು ದಿ:28–04–2015ರ ಬೆಳಿಗ್ಗೆ 11–00 ಘಂಟೆಗೆ ಪ್ರಾಯೋಗಿಕವಾಗಿ 100 ಮೀಟರ್ ಉದ್ದದಷ್ಟು ಕೇಬಲ್ ಅಳವಡಿಕೆ ಮಾಡಲಾಗುವುದು ಸದರಿ ಸಮಯದಂದು ಎಲ್ಲಾ ಟೆಲಿಕಾಂ ಕಂಪನಿಗಳ ಪದಾಧಿಕಾರಿಗಳು ಹಾಜರಿದ್ದು ವೀಕ್ಷಿಸಬೇಕೆಂದು ತಿಳಿಸಿದರು. ಓ.ಎಫ್.ಸಿ. ಕೇಬಲ್ ಅಳವಡಿಸುವಾಗಿ ಆಯಾ ಸಂಸ್ಥೆಗಳು ತಪ್ಪದೇ ಬ್ಯಾರಿಕೇಡ್‌ಗಳನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ. ಒಂದುವೇಳೆ ಸದರಿ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ಕೇಬಲ್ ಅಳವಡಿಸಿ ಸಾರ್ವಜನಿಕರಿಗೆ ಅನಾನುಕೂಲವನ್ನುಂಟು ಮಾಡಿದಂತಹ ಸಂಸ್ಥೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಹ ತಿಳಿಸಿದರು.

ಮುಖ್ಯ ಅಭಿಯಂತರರು (ಓ.ಎಫ್.ಸಿ.)ರವರು ಮಾತನಾಡುತ್ತಾ ಪಾಲಿಕೆ ವತಿಯಿಂದ ನಿಯಮಾನುಸಾರ ಅನುಮತಿ ಪಡೆದು ಅಳವಡಿಸಿರುವ ತಮ್ಮ ತಮ್ಮ ಸಂಸ್ಥೆಯ ಬಣ್ಣದ ಡಕ್ಟ್‌ಗಳ ಮಾದರಿಗಳನ್ನು ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿಗೆ ಸಲ್ಲಿಸಲು ಸಹ ಸಭೆಯಲ್ಲಿ ತಿಳಿಸಿದರು.

**ಚರ್ಚೆಯ ನಂತರ ಸಭೆಯಲ್ಲಿ ಕೈಗೊಂಡ ತೀರ್ಮಾನಗಳು:**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲು ಅನುಮತಿ ಪಡೆಯಲಾಗಿರುವ ರಸ್ತೆ ಪ್ರದೇಶಗಳನ್ನು ಹಾಗೂ ಈವರೆಗೂ ತಮ್ಮ ತಮ್ಮ ಸಂಸ್ಥೆಗಳಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಲಾಗಿರುವ ಹಾಗೂ ಅನುಮತಿಗಿಂತ ಹೆಚ್ಚುವರಿಯಾಗಿ ಅಳವಡಿಸಲಾಗಿರುವ ರಸ್ತೆ ಪ್ರದೇಶಗಳನ್ನು ಗೂಗಲ್ ಮ್ಯಾಪ್‌ನಲ್ಲಿ ಗುರ್ತಿಸಿ ಸಾಫ್ಟ್ ಕಾಪಿಯೊಂದಿಗೆ ದೃಢೀಕರಿಸಿ ಪಾಲಿಕೆಗೆ ದಿನಾಂಕ: 07–05–2015 ರಂದು ಸಂಜೆ 5–00 ಘಂಟೆಯೊಳಗಾಗಿ ಸಲ್ಲಿಸಲು ಸೂಚಿಸಲಾಯಿತು.
- ಓ.ಎಫ್.ಸಿ. ಅಳವಡಿಕೆ ಸಂಸ್ಥೆಗಳು ತಾವು ಘೋಷಿಸಿರುವ ಅನಧಿಕೃತ ಓ.ಎಫ್.ಸಿ./ಡಕ್ಟ್ ಶುಲ್ಕಗಳನ್ನು ಬಾಕಿ ಉಳಿಸಿಕೊಂಡಿರುವಂತಹ ಸಂಸ್ಥೆಗಳಿಗೆ ಡಿಮ್ಯಾಂಡ್ ನೋಟೀಸ್ ಕಳುಹಿಸಲು ಸಹ ತೀರ್ಮಾನಿಸಲಾಯಿತು.

ಆಡಳಿತಗಾರರು.

- ಈಗಾಗಲೇ ಡಿಮ್ಯಾಂಡ್ ನೋಟೀಸ್ ಕಳುಹಿಸಲಾಗಿರುವ ಸಂಸ್ಥೆಗಳಿಗೆ ಬಾಕಿ ಉಳಿಸಿಕೊಂಡಿರುವ ಶುಲ್ಕದ ಮೇಲೆ ನಿಯಮಾನುಸಾರ ಬಡ್ಡಿ ವಿಧಿಸುವಂತೆಯೂ ಸಹ ತೀರ್ಮಾನಿಸಲಾಯಿತು.
- ದಿನಾಂಕ 08–05–2015ರಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಲಾಗಿರುವ ಓ.ಎಫ್.ಸಿ. ಕೇಬಲ್‌ಗಳ ಸಂಪರ್ಕವನ್ನು ಪುನಃ ಸಂಪರ್ಕಿಸಲಾಗದಂತಹ ರೀತಿಯಲ್ಲಿ ಕಡಿತಗೊಳಿಸಲಾಗುವುದೆಂದು ತೀರ್ಮಾನಿಸಲಾಯಿತು.
- ಈಗಾಗಲೇ ಕೇಬಲ್ ಅಳವಡಿಕೆ ಮಾಡಲು ಅವಧಿ ವಿಸ್ತರಣೆಗಾಗಿ ಹಾಗೂ ಹೆಚ್ಚುವರಿ ಪ್ರದೇಶಗಳಲ್ಲಿ ಕೇಬಲ್ ಅಳವಡಿಕೆಗಾಗಿ ಸಂಸ್ಥೆಗಳು ಸಲ್ಲಿಸಿರುವಂತಹ ಅರ್ಜಿಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಆಡಳಿತಗಾರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು

: ಆಯುಕ್ತರಿಗೆ ಮಾಹಿತಿಗಾಗಿ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
: ಮುಖ್ಯ ಅಭಿಯಂತರರು (ಓ.ಎಫ್.ಸಿ.)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಮುಖ್ಯ ಅಭಿಯಂತರರು (ರ.ಮೂ.ಸೌ)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಓ.ಎಫ್.ಸಿ. ಸಂಸ್ಥೆಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಕಛೇರಿ ಪ್ರತಿ.